ಕಮ್ಮಿಯಾಗಿತ್ತು. ತೋಯ್ದು ತಲೆಬಾಗಿಸಿ ನಿಂತ ಗುಡಿಸಲಿನಲ್ಲಿ ಕೈಕಾಲುಗಳೆಲ್ಲವನ್ನು ಕೂಡಿಸಿ ದುಂಡಗೆ ತುದಿಗುಂಡಿಯಲ್ಲಿ ಕೂತಲ್ಲಿಯೇ ಚೆಂಡು ಮಂಡಿಯ ಸಂದಿಯಲ್ಲಿಟ್ಟು ತೂಕಡಿಸುತ್ತಿದ್ದ ಮರಿಯಪ್ಪನಿಗೆ ಬಸ್ಗರೆಯುತ್ತಿದ್ದ ಶಬ್ದ ಕಿವಿಗೆ ಬಿದ್ದಿತು. ಮೆಲ್ಲಗೆ ವಾಸ್ತವಕ್ಕೆ ಬರುವಷ್ಟರಲ್ಲಿ ಹೊಲವೆಲ್ಲಾ ನೀರು. ಎಲ್ಲಿ ನೋಡಿದರೂ, ಎತ್ತ ತಿರುಗಿದರೂ ನೀರು. ಬದುವಿನ ಮೇಲಿನ ಗುಡಿಸಲು ದ್ವೀಪದಂತೆ ಕಾಣುತ್ತಿತ್ತು. ರಾಶಿ, ಕಣ ನೀರಿನಲ್ಲಿ ಮುಚ್ಚಿ ಮರೆಯಾಗಿತ್ತು. ಕಬ್ಬು ನೀರಿನಲ್ಲಿ ನಿಂತು, ಮೇಲಿನಿಂದ ಆ ನಸುಕಿನಲ್ಲಿ ಅರ್ಧಕ್ಕೆ ಕಾಣುತ್ತಿತ್ತು. ಕಣ, ರಾಶಿ, ಬೆಳೆಯನ್ನು ನುಂಗಿದ್ದ ಸುತ್ತಲ ನೀರು ಕಂಡು ಮರಿಯಪ್ಪನಿಗೆ ಹೊಟ್ಟೆಗೆ ಎತ್ತಿ ಕಲ್ಲು ಹಾಕಿದಂತಾಯಿತು. ನಿಂತಲ್ಲೇ ಕುಸಿದು ಕುಂತು ಎರಡು ಕೈಯಿಂದ ಲಬೊ ಲಬೊ ಹೊಯ್ದುಕೊಳ್ಳುತ್ತಾ, ಎದೆ ಬಡಿದುಕೊಳ್ಳುತ್ತಾ ಗೋಳಾಡಿದ. ಬಿದ್ದು ಒದ್ದಾಡಿದ. ಸುತ್ತಲೂ ಯಾರೆಂದರ್‍ಯಾರೂ ಇಲ್ಲ. ಎತ್ತ ನೋಡಿದರೂ ಹೊಲಗಳೆಲ್ಲ ನೀರಾಗಿದ್ದವು.

ಬಸ್... ಎಂದು ಬುಸುಗುಡುವ ಹಳ್ಳ ಆರ್ಭಟದಿಂದ ಕೇಕೆ ಹಾಕಿ ಕುಣಿಯತೊಡಗಿತ್ತು. ಅದನ್ನು ಕೇಳಿ ಗಾಬರಿಗೊಂಡ ಮರಿಯಪ್ಪ ಆ ಕಡೆ ಹಳ್ಳದತ್ತ ನೋಟ ಹರಿಸಿದ. ಮೈದುಂಬಿ ಹರಿಯುತ್ತಿದ್ದ ಹಳ್ಳದ ಆರ್ಭಟ ನೋಡಿದ ಮರಿಯಪ್ಪ, ಕ್ಷಣಮಾತ್ರದಲ್ಲಿ ಅದು ತನ್ನನ್ನು ನುಂಗುವುದೆಂಬಂತೆ ನಡುಗುತ್ತಿದ್ದ. ನೋಡನೋಡುತ್ತಿದ್ದಂತೆ ಭೋರ್ಗರೆಯುವ ಸದ್ದು ಜೋರಾಗಿ, ಆಳೆತ್ತರದ ತೆರೆ ಬಾಯ್ದೆರೆದುಕೊಂಡು ಬರುತ್ತಲೇ, ‘ಅಯ್ಯೋ... ಹೊತ್ತ್ಯೋ... ಎಲ್ಲಾ ಹೊತ್ತ್ಯೋ...’ ಎಂದು ಎದೆ ಬಡಿದುಕೊಂಡ. ಇನ್ನೇನು ಆ ತೆರೆ ರೂಪದ ಆರ್ಭಟಿಸುವ ನೀರು ಹತ್ತಿಪ್ಪತ್ತು ಹೆಜ್ಜೆ ದೂರದಲ್ಲಿದ್ದಾಗ ಪ್ರಾಣಭಯದಲ್ಲಿ ಬೇನಗಿಡ ಏರಿದ. ರಪ್ಪನೆ ಬೇನಗಿಡದ ಬಡ್ಡೆಗೆ ಬಡಿದ ಆ ತೆರೆ ಮುನ್ನುಗ್ಗುತ್ತಾ ಹೋಯಿತು.

ಮರಿಯಪ್ಪ ಬೇನಗಿಡದ ಎತ್ತರದ ಟೊಂಗೆಯಲ್ಲಿ ಕೂತು ಹಣೆ ಹಣೆ ಬಡಿದುಕೊಳ್ಳುತ್ತಾ ಗೋಳು ಹೊಯ್ದುಕೊಳ್ಳುತ್ತಿದ್ದ. ನೋಡನೋಡುತ್ತಲೇ, ಆ ಕಡೆ ದಂಡೆಯಲ್ಲಿ ಯಾರೋ ಹತ್ತೆಂಟು ಜನ ಬಂದು ಕಣ್ಣಾಡಿಸಿದಂತೆ ಕಂಡನೋ, ಇತ್ತ ಮೆಕ್ಕೆಜೋಳದ ಮೇಲೆ ಮುಚ್ಚಿದ ತಾಡಪಾಲು ಮೇಲೆದ್ದು ತೇಲುತ್ತ ನೀರಿನ ರಭಸಕ್ಕೆ ಹೋಗುತ್ತಿದ್ದಂತೆ, ಅದರ ಹಿಂದೆ ಎದ್ದ ಮೆಕ್ಕೆಜೋಳ ಅದರ ಗುಂಟ ನೀರಲ್ಲಿ ಕಲಸಿ ಓಡುತ್ತಿರುವುದನ್ನು ಕಂಡು ಮರಿಯಪ್ಪನ ಹೊಟ್ಟೆಯಲ್ಲಿ ಕೆಂಡ ಕಲಸಿದಂತಾಗಿ, ನೀರಲ್ಲಿ ತನ್ನ ಬದುಕೇ ಮುಳುಗಿದಷ್ಟು ಸಂಕಟ ಉಕ್ಕುತ್ತಿದ್ದಂತೆ ಕಣ್ಣಿಗೆ ಮಂಜು ಕವಿಯಿತು. ಕತ್ತಲು ಕತ್ತಲಾಗಿ ಏನೂ ಕಾಣದಂತಾಗಿ, ದೇಹವನ್ನು ನಿಯಂತ್ರಿಸುವಾಗ ಗಿಡದ ಮೇಲೆಯೇ ಪ್ರಜ್ಞೆ ಕಳೆದು ಹೋಗಲು, ಬಳ್ಳಿಯಿಂದ ಉದುರಿದ ಬಾಡಿದ ಹೂವಿನಂತೆ ಮರಿಯಪ್ಪ ಬಿದ್ದು ಬಿಟ್ಟ. ಘರ್ಜಿಸುವ ಹಳ್ಳ ತನ್ನ ಅಗಾಧ ಬಾಹುಗಳಲ್ಲಿ ಮರಿಯಪ್ಪನನ್ನು ಕಲಸಿಕೊಂಡು ಕುಣಿಯುತ್ತಾ ಸಾಗುತ್ತಲೇ ಇತ್ತು... ದಂಡೆಗೆ ಮತ್ತಷ್ಟು ಜನರು, ಚೆನ್ನಮ್ಮ, ಕಲ್ಲ ಓಡಿ ಬಂದು ದಿಟ್ಟಿಸಿದರು. ಭೋರ್ಗರೆದು ಹರಿಯುವ ನೀರು ಬೆಳಕು ಹರಿಯುತ್ತಿದ್ದಂತೆ ತನ್ನ ಹೊಳಪು ಹೆಚ್ಚಿಸಿಕೊಳ್ಳತೊಡಗಿತು.




**ಕಾಸಿಂ ನದಾಫ್ ಭೈರಾಪುರ**

ಕೊಪ್ಪಳ ತಾಲ್ಲೂಕಿನ ಭೈರಾಪುರ ಗ್ರಾಮದವರು. ಪಿಯುಸಿ ತನಕ ವಿದ್ಯಾಭ್ಯಾಸ ಮಾಡಿದ್ದಾರೆ. ಸಾಹಿತ್ಯದ ಮೇಲೆ ಅಪಾರ ಒಲವು. ಕತೆ, ಕವನ, ಗಝಲ್, ಮಕ್ಕಳ ಕವಿತೆಗಳನ್ನು ಬರೆಯುತ್ತಾರೆ. ‘ಮೌನ ಮನದ ಮೃದಂಗ’ ಅವರ ಮೊದಲ ಕವನ ಸಂಕಲನ.